ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು 1 ನೇ ಅಧಿಕ ಜೆಎಂಎಫ್‌ಸಿ ನ್ಯಾಯಾಲಯ
ರಾಣೇಬೆನ್ನೂರು.
ಸಿ.ಸಿ.ಸಂಖ್ಯೆ: 392/2019

ಪಿ ಡಬ್ಲ್ಯೂ: 5
ಸಿ ಡಬ್ಲ್ಯೂ: 15

| | | |
|---|---|---|
| ಸಾಕ್ಷಿಯ ಹೆಸರು | : | ನೀಲಪ್ಪ |
| ತಂದೆಯ ಹೆಸರು | : | ನಿಂಗಪ್ಪ ಊದಗಟ್ಟಿ |
| ವಯಸ್ಸು | : | 63 |
| ಉದ್ಯೋಗ | : | ನಿವೃತ್ತ ಎ ಎಸ್ ಐ |
| ವಾಸಸ್ಥಳ | : | ರಾಣೇಬೆನ್ನೂರು |

ದಿನಾಂಕ: 18-07-2023 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ನಾನು 2014 ರಿಂದ 2018 ರ ವರೆಗೆ ರಾಣೇಬೆನ್ನೂರು ಸಂಚಾರ ಪೊಲೀಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 09-12-2018 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಬೆಳಗ್ಗೆ 09-45 ರ ಸಮಯದಲ್ಲಿ ಚಾ ಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿ ಅಪರಾಧ ಪ್ರಕರಣ ಸಂಖ್ಯೆ 13/2018 ರಂತೆ ಪ್ರಕರಣವನ್ನು ದಾಖಲಿಸಿ ಪ್ರ ವ ವರದಿಯನ್ನು ಘನ ನ್ಯಾಯಾಲಯಕ್ಕೆ ಹಾಗೂ ಮೇಲಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ.

3. ಅದೇ ದಿನ ಚಾ ಸಾ 1 ರವರೊಂದಿಗೆ ಅಪಘಾತವಾದ ಸ್ಥಳಕ್ಕೆ ಬೇಟಿ ನೀಡಿ ಚಾ ಸಾ 2 ಮತ್ತು 3 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು, ಚಾ ಸಾ 1 ರವರು ಸ್ಥಳ ತೋರಿಸಿದ ಮೇರೆಗೆ ಘಟನಾ ಸ್ಥಳದ ಪಂಚನಾಮೆಯನ್ನು ಬೆಳಗ್ಗೆ 11-00 ರಿಂದ 11-45 ರ ವರೆಗೆ ಜರುಗಿಸಲಾಯಿತು. ವರದಿ ಸಿದ್ಧಪಡಿಸಿ ನಾನು ಹಾಗೂ ಸಾಕ್ಷಿದಾರರು ಸಹಿ ಮಾಡಿರುತ್ತೇವೆ. ಸದರಿ ಕಾಲಕ್ಕೆ ಫೋಟೋಗಳನ್ನು ತೆಗೆಸಿ ಹಾಗೂ ನಕ್ಷೆಯನ್ನು ಸಿದ್ಧಪಡಿಸಲಾಯಿತು.

4. ಅಪಘಾತವಾದ ದಿನಾಂಕ 06-12-2018 ರಂದು ರಸ್ತೆಯಲ್ಲಿ ಅಪಘಾತವಾಗಿದ್ದು ಸುಗಮ ಸಂಚಾರದ ಸಲುವಾಗಿ ಅದೇ ದಿನ ನಮ್ಮ ಠಾಣಾ ಸಿಬ್ಬಂದಿಗಳು ಅಪಘಾತಕ್ಕೊಳಪಟ್ಟ ವಾಹನಗಳನ್ನು ಠಾಣೆಗೆ ತಂದಿದ್ದರು. ದೂರು ಸ್ವೀಕರಿಸಿದ ದಿನ ಅಂದರೆ ದಿನಾಂಕ 09-12-2018 ರಂದು ಚಾ ಸಾ 1, ಪಂಚರಾದ ಚಾ ಸಾ 2 ಮತ್ತು 3 ರವರ ಸಮಕ್ಷಮ ಠಾಣೆಯಲ್ಲಿ ಅಪಘಾತಕ್ಕೊಳಪಟ್ಟ ದ್ವಿಚಕ್ರ ವಾಹನಗಳ ಸಂಖ್ಯೆ ಕೆಎ-27/ಜೆ-2701 ಹಾಗೂ ಕೆಎ-27/ಇಎಲ್-1347 ನ್ನು ಚಾ ಸಾ 1 ರವರು ಗುರುತಿಸಿದ ಮೇರೆಗೆ ಅಮಾನತು ಪಂಚನಾಮೆಯನ್ನು ಮಧ್ಯಾಹ್ನ 12-00 ರಿಂದ 12-45 ರ ವರೆಗೆ ಜರುಗಿಸಿ ಅಮಾನತುಪಡಿಸಿಕೊಳ್ಳಲಾಯಿತು. ವರದಿ ಸಿದ್ದಪಡಿಸಿ ನಾನು ಹಾಗೂ ಸಾಕ್ಷಿದಾರರು ಸಹಿ ಮಾಡಿರುತ್ತೇವೆ. ಅದೇ ದಿನ ಐಎಂವಿ ವರದಿ ಕೋರಿ ಎ.ಆರ್.ಟಿ.ಓ. ರಾಣೇಬೆನ್ನೂರು ರವರಿಗೆ ಮನವಿ ಸಲ್ಲಿಸಲಾಯಿತು. ಅದೇ ದಿನ ಚಾ ಸಾ 5 ರಿಂದ 7 ರವರ ಹೇಳಿಕೆಗಳನ್ನು ಪಡೆದುಕೊಳ್ಳಲಾಯಿತು. ದಿನಾಂಕ 10-12-2018 ರಂದು ಚಾ ಸಾ 4 ರವರ ಹೇಳಿಕೆಗಳನ್ನು ಪಡೆದುಕೊಳ್ಳಲಾಯಿತು. ಮುಂದಿನ ತನಿಖೆಗಾಗಿ ಕಡತವನ್ನು ಚಾ ಸಾ 16 ರವರಿಗೆ ವರ್ಗಾಯಿಸಿರುತ್ತೇನೆ.

5. ನಿಪಿ 18 ರ ದೂರಿನಲ್ಲಿನ ಸಾಕ್ಷಿದಾರರ ಸಹಿಯನ್ನು **ನಿಪಿ 18 ಬಿ** ಎಂದು, ನಿಪಿ 1 ರ ಮಹಜರುನಲ್ಲಿನ ಸಾಕ್ಷಿದಾರರ ಸಹಿಯನ್ನು **ನಿಪಿ 1 ಸಿ** ಎಂದು, ನಿಪಿ 6 ರಲ್ಲಿನ ಸಾಕ್ಷಿದಾರರ ಸಹಿಯನ್ನು **ನಿಪಿ 6 ಸಿ** ಎಂದು, ನಿಪಿ 11 ರಲ್ಲಿನ ಸಾಕ್ಷಿದಾರರ ಸಹಿಯನ್ನು **ನಿಪಿ 11 ಎ** ಎಂದು, ಪ್ರ ವ ವರದಿಯನ್ನು **ನಿಪಿ 20** ಎಂದು, ಸಾಕ್ಷಿದಾರರ ಸಹಿಯನ್ನು **ನಿಪಿ 20 ಎ** ಎಂದು ಗುರುತಿಸಲಾಯಿತು. ನಿಪಿ 2 ರಿಂದ 5, 7 ರಿಂದ 10 ರ ಪೋಟೋಗಳನ್ನು ಸಾಕ್ಷಿದಾರರು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಯು.ಡಿ.ಡಿ. ವಕೀಲರಿಂದಃ**

ದೂರು ಸ್ವೀಕರಿಸಿದ ನಂತರ ನಾನು ಘಟನೆ ಬಗ್ಗೆ ಪರಿಶೀಲಿಸಿ ಪ್ರಕರಣ ದಾಖಲಿಸಿರುತ್ತೇನೆ. ನಿಪಿ 18 ನ್ನು ಚಾ ಸಾ 1 ರವರೇ ಸಿದ್ದಪಡಿಸಿಕೊಂಡು ಬಂದಿದ್ದರು. ನಾನು ಘಟನಾ ಸ್ಥಳದಲ್ಲಿ ಯಾವುದೇ ಮಹಜರು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಚಾ ಸಾ 1 ರಿಂದ 3 ರವರು ಹಾಜರು ಇರಲಿಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲ ಆಗಲೆಂದು ಪೋಟೋಗಳನ್ನು

ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಅಪಘಾತವಾದ ಕಾಲಕ್ಕೆ ವಾಹನಗಳನ್ನು ಠಾಣೆಗೆ ತಂದ ಬಗ್ಗೆ ನಿಪಿ 6 ರಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಚಾ ಸಾ 2 ಮತ್ತು 3 ರವರಿಗೆ ಪಂಚರಾಗಲು ಯಾವುದೇ ನೋಟೀಸ್ ನೀಡಿರುವುದಿಲ್ಲ. ಮೌಕಿಖವಾಗಿ ಮನವಿ ಮಾಡಿರುತ್ತೇವೆ. ಪಂಚರು ಚಾ ಸಾ 1 ರವರೊಂದಿಗೆ ಬಂದಿರುತ್ತಾರೆ. ಅವರು ಬಂದ ಬಗ್ಗೆ ಠಾಣಾ ದಾಖಲೆಗಳಲ್ಲಿ ನಮೂದಾಗಿರುತ್ತದೆ ಎಂದರೆ ಸರಿ. ಸದರಿ ನಮೂದನ್ನು ಪರಿಶೀಲಿಸಿರುವುದಿಲ್ಲ. ಸದರಿ ನಮೂದನ್ನು ಅಂತಿಮ ವರದಿಯೊಂದಿಗೆ ಸಲ್ಲಿಸಿರುವುದಿಲ್ಲ. ನಿಪಿ 1 ನ್ನು ಠಾಣೆಯಲ್ಲಿ ಸಿದ್ದಡಿಸಿ ಸಾಕ್ಷಿದಾರರ ಸಹಿ ಪಡೆದುಕೊಳ್ಳಲಾಗಿದೆ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ತಪ್ಪು ಇಲ್ಲದಿದ್ದರೂ ಸುಳ್ಳು ದೂರು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು.

ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.